# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು–570006

**ದಿನಾಂಕ: 06.12.2022ರಂದು ಅಪರಾಹ್ನ** 04.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ **58ನೇ** ವಿಶೇಷ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು<br>ಕರಾಮುವಿ, ಮೈಸೂರು |
| **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 | **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು | **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ,<br>ಮೈಸೂರು – 570 023 |
| **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 | **ಶ್ರೀಮತಿ ಲಾವಣ್ಯ.ಪಿ.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ,<br>ಮೈಸೂರು – 570 004 |
| **ಡಾ. ಪ್ರದೀಪ್.ಪಿ.ಆರ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 | --- |

ಕುಲಪತಿಗಳು ಕುಲಸಚಿವರು

| ಅನುಪಸ್ಥಿತರು | |
|---|---|
| **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ |
| **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ, ಮಂಗಳ ಗಂಗೋತ್ರಿ,<br>ಮಂಗಳೂರು – 574 199 | **ಶ್ರೀ ಪುಟ್ಟಣ್ಣ**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಕಛೇರಿ ವಿಳಾಸ : ನಂ.5009<br>5ನೇ ಮಹಡಿ, ಶಾಸಕರ ಭವನ- 5<br>**ಬೆಂಗಳೂರು – 560 001** |

**ವಿಶೇಷ ಆಹ್ವಾನಿತರು**

| | |
|---|---|
| **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿ<br>ಕರಾಮುವಿ, ಮೈಸೂರು | **ಶ್ರೀ. ಆರ್. ಭಾಸ್ಕರ್**<br>ಕಾರ್ಯಪಾಲಕ ಅಭಿಯಂತರರು<br>ಕರಾಮುವಿ, ಮೈಸೂರು |

ಸಭೆಯಲ್ಲಿ ಹಾಜರಿದ್ದ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು ವಿಶ್ವವಿದ್ಯಾನಿಲಯಕ್ಕೆ ನೂತನವಾಗಿ ನೇಮಕಗೊಂಡ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರಿಗೆ ಅಭಿನಂದನೆ ಸಲ್ಲಿಸಿದರು.

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಸ್ವಾಗತ ಮಾಡಲು ಮಾನ್ಯ ಕುಲಪತಿಗಳು ಕುಲಸಚಿವರಿಗೆ ತಿಳಿಸಿದರು.

ಕುಲಸಚಿವರು, ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು ಮತ್ತು ವಿಶೇಷ ಆಹ್ವಾನಿತರಾದ ಹಣಕಾಸು ಅಧಿಕಾರಿಗಳನ್ನು ಮತ್ತು ಕಾರ್ಯಪಾಲಕ ಅಭಿಯಂತರರನ್ನು ಕೂಡ ಸಭೆಗೆ ಸ್ವಾಗತಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 58ನೇ ವಿಶೇಷ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 58ನೇ ವಿಶೇಷ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ : 58.01**

ಅ) ದಿನಾಂಕ: 26.08.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 26.08.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸುವ ಬಗ್ಗೆ.

**ಅ) ದಿನಾಂಕ: 26.08.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 26.08.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.**

********

**ವಿಷಯ ಸಂಖ್ಯೆ : 58.02**

**ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಅರ್ಹ ಸಂಸ್ಥೆಗೆ ಭದ್ರತಾ ಸಿಬ್ಬಂದಿ ಸೇವೆ ಟೆಂಡರ್ ನೀಡುವ ಕುರಿತು.**

*********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ / ಪ್ರಾದೇಶಿಕ ಕೇಂದ್ರಗಳ ಕಟ್ಟಡ ಇತ್ಯಾದಿಗಳ ಸ್ಥಿರ ಮತ್ತು ಚರ ಆಸ್ತಿಗಳ ಸಂರಕ್ಷಣೆ ದೃಷ್ಟಿಯಿಂದ ಕೆಟಿಪಿಪಿ ಕಾಯ್ದೆ/ನಿಯಮಗಳಂತೆ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸಿಬ್ಬಂದಿ ಸೇವೆಯನ್ನು ಎರಡು ವರ್ಷಗಳ ಅವಧಿಗೆ ಪಡೆಯುವ ಸಂಬಂಧ e-procurement portal ಮುಖಾಂತರ **ದಿನಾಂಕ: 22.07.2022ರಂದು** ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಆರು ಬಿಡ್‌ದಾರರು ಭಾಗವಹಿಸಿದ್ದು,

ಬಿಡ್‌ದಾರರ ವಿವರಗಳು:

(1) M/s. Novel Security Services Bangalore
(2) M/s Appu Detective & Security Services, Bangalore
(3) M/s Sharp watch Investigation & Security Services, Mysore
(4) M/s Shree Ranganath Enterprises Mysore
(5) M/s KSF 9 Corporate Services private
(6) M/s Detectwell Security Service Pvt Ltd., Bangalore

**ದಿನಾಂಕ:25.08.2022** ರಂದು ತಾಂತ್ರಿಕ ಬಿಡ್ ತೆರೆದು ಟೆಂಡರ್ ಪ್ರಕಟಣೆಯನ್ವಯ ಬಿಡ್‌ದಾರರು ಸಲ್ಲಿಸಿರುವ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲನೆಗೆ ಹಾಗೂ ಅಂತಿಮಗೊಳಿಸಲು, **ದಿನಾಂಕ: 19.09.2022ರಂದು** ತಾಂತ್ರಿಕ ಬಿಡ್ ಸಭೆಯನ್ನು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯ ಸದ್ಯಸರು ಆರು ಬಿಡ್‌ದಾರರ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸದ್ದಾಗ, M/s Detectwell Security Service Pvt Ltd., Bangalore, ಇವರು ಸಲ್ಲಿಸಿರುವ ದಾಖಲೆಗಳ ರೀತ್ಯ ಕ್ರಮ ಸಂಖ್ಯೆ 07ರಲ್ಲಿ ವಿಶ್ವವಿದ್ಯಾನಿಲಯದ ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಲಾಗಿರುವ (Mandatory) ಗೆ ಪೂರಕವಾದ ದಾಖಲೆಗಳನ್ನು ಸಲ್ಲಿಸಿಲ್ಲದ, ಕಾರಣದಿಂದ ಸದರಿ ಬಿಡ್‌ದಾರರನ್ನು ತಾಂತ್ರಿಕ ಬಿಡ್‌ನಿಂದ ಅನರ್ಹಗೊಳಿಸಿ, ಉಳಿದ ಐವರು ಬಿಡ್‌ದಾರನ್ನು ಮುಂದಿನ ಹಂತಕ್ಕೆ ಶಿಫಾರಸ್ಸು ಮಾಡಿತ್ತು. ಶಿಫಾರಸ್ಸುಗೊಂಡ ಸಂಸ್ಥೆಗಳು ಈ ಕೆಳಕಂಡಂತಿವೆ.

**ಕುಲಪತಿಗಳು** **ಕುಲಸಚಿವರು**

(1) M/s. Novel Security Services Bangalore

(2) M/s Appu Detective & Security Services, Bangalore

(3) M/s Sharp watch Investigation & Security Services, Mysore

(4) M/s Shree Ranganath Enterprises Mysore

(5) M/s KSF 9 Corporate Services private limited Bangalore

**ದಿನಾಂಕ: 23.09.2022** ರಂದು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಮೇಲಿನ ಅರ್ಹ ಸಂಸ್ಥೆಗಳ ಆರ್ಥಿಕ ಬಿಡ್ ತೆರೆಯಲಾಗಿ 05 ಸಂಸ್ಥೆಗಳ ಬಿಡ್‌ದಾರರು ಸಹ 3% ಸರ್ವಿಸ್ ಚಾರ್ಜ್ ನಮೂದಿಸಿದ್ದು, ಒಂದೇ ಮೌಲ್ಯದ ಸೇವಾ ಶುಲ್ಕ ನಮೂದಿಸಿರುವುದರಿಂದ, ಬಿಡ್‌ದಾರರು ಏಕ ರೀತಿಯ ಸೇವಾ ಶುಲ್ಕವನ್ನು ನಮೂದಿಸಿದಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಟೆಂಡರ್ ಪ್ರಕಟಣೆಯಲ್ಲಿನ ಮಾರ್ಗಸೂಚಿಗಳನ್ವಯ 05 (ಐದು) ಮಾನದಂಡಗಳನ್ನು

ಅಳವಡಿಸಿಕೊಂಡಿರುವ ಪ್ರಕಾರ 50 (ಐವತ್ತು) ಅಂಕಗಳನ್ನು ನಿಗದಿಪಡಿಸಲಾಗಿತ್ತು, ಈ ಐದು ಸಂಸ್ಥೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುವ ಸಂಸ್ಥೆ/ ಬಿಡ್‌ದಾರರನ್ನು ಅಂತಿಮಗೊಳಿಸಲು ಕ್ರಮವಹಿಸಬೇಕಿರುತ್ತದೆ.

ಮಾರ್ಗಸೂಚಿಗಳು ಈ ಕೆಳಕಂಡತಿವೆ.

1. Number of employees registered and engaged in security services — **Max marks-10**
2. Certificate for transparent manner payment will be considered as Track record and compliance to labour laws. — **Max marks -10**
3. Details of EPF and ESI Registration number of the employees in form (labour law obligation)-E relating to Form-C of Labour Department be uploaded. — **Max marks-10**
4. Total number of years of experience asper Form-C in providing security services. — **Max marks-10**
5. Total turnover from Security Services only will be considered. The committee may adopt such other principles relevant for making recommendations — **Max marks-10**

ಮೇಲ್ಕಂಡ ಮಾನದಂಡಗಳನ್ವಯ ಆರ್ಥಿಕ ಬಿಡ್ ಮೌಲ್ಯಮಾಪನ ಸಮಿತಿಯು ಶಿಫಾರಸ್ಸಿನ (ದಿನಾಂಕ:30.09.2022ರ ಸಭಾ ನಡಾವಳಿಯನ್ನು ಲಗತ್ತಿಸಿದೆ) ಮೇರೆಗೆ ಹೆಚ್ಚಿನ ಅಂಕಗಳನ್ನು ಪಡೆದಿರುವ ಸಂಸ್ಥೆಯನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ / ಪ್ರಾದೇಶಿಕ ಕೇಂದ್ರಗಳ ಕಟ್ಟಡಗಳು ಇತ್ಯಾದಿಗಳಿಗೆ ಎರಡು ವರ್ಷದ ಅವಧಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸುವ ಸಂಬಂಧ ಕರಾರು ಒಪ್ಪಂದ ಮೇರೆಗೆ ಕಾರ್ಯದೇಶ ನೀಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ .

********

ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಹಣಕಾಸು ಅಧಿಕಾರಿಯವರಿಗೆ ಇದರ ಬಗ್ಗೆ ಕೂಲಂಕಷವಾಗಿ ವಿವರಿಸುವಂತೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು, ಭದ್ರತಾ ಸೇವೆ ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯವು ಅನುಸರಿಸಬೇಕಾದ ಅಂಶಗಳನ್ನು ಸಭೆಯ ಗಮನಕ್ಕೆ ತಂದರು. ಟೆಂಡರ್ ಮಾರ್ಗಸೂಚಿಗಳನ್ವಯ M/s KSF 9 Corporate Services private limited Bangalore ಇವರು ಹೆಚ್ಚು ಅಂಕಗಳನ್ನು ಗಳಿಸಿರುತ್ತಾರೆಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಕುಲಪತಿಗಳು ಕುಲಸಚಿವರು

ತೀರ್ಮಾನ :

ಕೂಲಂಕಷವಾಗಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಭದ್ರತಾ ಸೇವೆ ಪಡೆಯುವ ಸಂಬಂಧ ಸಂಪೂರ್ಣ ಮಾಹಿತಿಗಳನ್ನು ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿತು.

*******

ವಿಷಯ ಸಂಖ್ಯೆ : 58.03

ವಿಷಯ : ಕರಾಮುವಿಯ ಮಂಡಕಳ್ಳಿ ಬಳಿ ನಿರ್ಮಿಸಿರುವ ಶೈಕ್ಷಣಿಕ ಭವನದ ಕಟ್ಟಡ ಹಾಗೂ 10 ಎಕರೆ ಜಾಗವನ್ನು ಬಾಡಿಗೆಗೆ ನೀಡುವುದರ ಬಗ್ಗೆ.

*********

ಕರಾಮುವಿ ನಿಲಯಕ್ಕೆ ಸೇರಿರುವ ಮೈಸೂರಿನ ಮಂಡಕಳ್ಳಿಯ ಗ್ರಾಮದ ಬಳಿ ಇರುವ ಹತ್ತು ಎಕರೆಯ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಶೈಕ್ಷಣಿಕ ಭವನ ಕಟ್ಟಡವನ್ನು ಒಳಗೊಂಡಂತೆ ಪೂರ್ಣ ಪ್ರದೇಶವನ್ನು ಕರ್ನಾಟಕ ಸರ್ಕಾರದ IT BT ಇಲಾಖೆಗೆ ಒಳಪಡುವ ಸಂಸ್ಥೆಯಾದ Karnataka Innovation & Technology Society (KITS) ಸಂಸ್ಥೆಯವರು Karnataka Digital Economy Mission (KDEM) ಮೂಲಕ Global Technology Center Plug & Play Facility ಯೋಜನೆಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಬಾಡಿಗೆ ಆಧಾರದ ಮೇಲೆ ನೀಡುವಂತೆ ವಿವಿನಿಲಯಕ್ಕೆ ಸಂಬಂಧಪಟ್ಟ ಇಲಾಖೆಯ ಅಧೀನ ಕಾರ್ಯದರ್ಶಿಗಳು ಪತ್ರದಲ್ಲಿ ತಿಳಿಸಿರುತ್ತಾರೆ. ಈ ಸಂಬಂಧ ಸದರಿ ವಿಷಯವನ್ನು 169ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಈ ಸಂಬಂಧ ಸದರಿ ವಿಷಯವನ್ನು ದಿನಾಂಕ: 26.08.2022 ರಂದು ಜರುಗಿದ 169ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ಘನ ವ್ಯವಸ್ಥಾಪನಾ ಮಂಡಳಿ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ವಿವಿನಿಲಯದ ಪರವಾಗಿ ನುರಿತ ಪರಿಣಿತರ ಅಭಿಪ್ರಾಯ ಪಡೆದು, ಅಗತ್ಯ ಷರತ್ತುಗಳನ್ನು ಒಳಗೊಂಡಂತೆ ಕರಾರು ಒಪ್ಪಂದ ಮಾಡಿಕೊಂಡು ಮತ್ತು ಇದರ ಆಧಾರದ ಮೇಲೆ ಸದರಿ ಕಟ್ಟಡ ಹಾಗೂ ಪ್ರದೇಶವನ್ನು ಕೋರಿರುವ ಇಲಾಖೆಯವರಿಗೆ ಬಾಡಿಗೆಗೆ ನೀಡಲು ಸದರಿ ವಿಷಯವನ್ನು Tripartite ಕರಾರಿನೊಂದಿಗೆ ಮುಂದಿನ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಮಂಡಿಸುವಂತೆ ತಿಳಿಸಲಾಗಿರುತ್ತದೆ.

ಈ ಸಂಬಂಧ ಕರ್ನಾಟಕ ಸರ್ಕಾರದ IT BT ಇಲಾಖೆಯ ಅಧೀನ ಕಾರ್ಯದರ್ಶಿಗಳು ಸದರಿ ಕಟ್ಟಡ ಹಾಗೂ ಪ್ರದೇಶದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕೆಲಸವನ್ನು ಅತ್ಯಂತ ತುರ್ತಾಗಿ ನಿರ್ವಹಿಸಬೇಕಾಗಿರುವ ಹಿನ್ನಲೆಯಲ್ಲಿ ಕರಾರನ್ನು/ ಒಡಂಬಡಿಕೆಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಿರುತ್ತಾರೆ. ಅಂತೆಯೇ ಸದರಿ ವಿಷಯವನ್ನು ಈಗಾಗಲೇ ಚರ್ಚಿಸಲಾಗಿದ್ದು KSOU, KITS ಹಾಗೂ KDEM ಮೂರು ಸಂಸ್ಥೆಗಳನ್ನು ಒಳಗೊಂಡಂತೆ ತ್ರಿಪಕ್ಷೀಯ (Tripartite) ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಮಾನ್ಯಕುಲಪತಿಗಳು ದಿನಾಂಕ:19.09.2022 ರಂದು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಸಮರ್ಥನೆಯನ್ನು ಕಾಯ್ದಿರಿಸಿ ಅನುಮೋದನೆಯನ್ನು ನೀಡಿರುವ ಹಿನ್ನೆಲೆಯಲ್ಲಿ Tripartite ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ.

ಕುಲಪತಿಗಳು　　　　ಕುಲಸಚಿವರು

ಪ್ರಸ್ತುತ Tripartite ಕರಾರಿನ ಅನುಸಾರ KDEM ರವರು ಸದರಿ ಕಟ್ಟಡ ಒಳಗೊಂಡಂತೆ 10 ಎಕರೆ ಸ್ಥಳವನ್ನು 30 ವರ್ಷಗಳ ಅವಧಿಗೆ ಮತ್ತು ಪ್ರತಿ ವರ್ಷಕ್ಕೆ ರೂ. 14,50,000/-ಗಳ ಬಾಡಿಗೆಗೆ ಹಾಗೂ ಈ ಬಾಡಿಗೆಯನ್ನು ಪ್ರತಿ 05 ವರ್ಷಕ್ಕೊಮ್ಮೆ ಪುನರ್ ನಿಗದಿಪಡಿಸಿಕೊಳ್ಳುವಂತೆ ಮತ್ತು ಇತರೆ ಷರತ್ತುಗಳನ್ನು ಒಳಪಟ್ಟಂತೆ ಬಾಡಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗೆ ತರುತ್ತಾ ಶೈಕ್ಷಣಿಕ ಕಟ್ಟಡ ಹಾಗೂ ಇದಕ್ಕೆ ಒಳಪಟ್ಟಿರುವ ಸಂಪೂರ್ಣ ಜಾಗವನ್ನು KDEM ರವರಿಗೆ ಬಾಡಿಗೆ ನೀಡಿರುವ ಬಗ್ಗೆ ಅನುಸಮರ್ಥನೆಗಾಗಿ ಮಂಡಿಸಿದೆ.

**********

ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಿ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ. ಎಲ್. ನಾಗೇಂದ್ರ ರವರು ಈ ವಿಷಯ ಕುರಿತು ಈಗಾಗಲೇ ಹಿಂದೆ ನಡೆದ 169ನೇ ಸಾಮಾನ್ಯ ಸಭೆಯಲ್ಲಿ ಚರ್ಚೆಗೊಂಡಿದ್ದು, (ವಿ.ಸಂ.169.08) 10 ಎಕರೆ ಜಮೀನಿನ ಬಗ್ಗೆ ಹಿಂದಿನ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ವಿ.ವಿ.ಯು ಕ್ರಮಕೈಗೊಂಡಿರುವುದಿಲ್ಲವೆಂದು, ಹಿಂದಿನ ಮಾನ್ಯ ಕುಲಪತಿಗಳು ಈ ವಿಷಯದ ಬಗ್ಗೆ ವಿ.ವಿ. ನಿಲಯಕ್ಕೆ ಸದುಪಯೋಗ ಆಗುವ ನಿಟ್ಟಿನಲ್ಲಿ ಕ್ರಮವಹಿಸಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಇದಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ಒದಗಿಸುವಂತೆ ಮಾನ್ಯ ಕುಲಪತಿಗಳನ್ನು ಕೋರಿದರು.

ಇದಕ್ಕೆ ಮಾನ್ಯ ಕುಲಪತಿಗಳು ಪ್ರತಿಕ್ರಿಯಿಸಿ, ಕಡತದಲ್ಲಿ ಯಾವ ರೀತಿ ಕ್ರಮ ವಹಿಸಲು ಸೂಚಿಸಲಾಗಿದೆಯೋ ಅದರಂತೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಎನ್. ಕೃಷ್ಣೇಗೌಡ ರವರು ಮಾತನಾಡಿ, ಮಾನ್ಯ ಉನ್ನತ ಶಿಕ್ಷಣ ಸಚಿವರ ನಿರ್ದೇಶನದಂತೆ ಕ್ರಮ ಕೈಗೊಂಡಿರುವುದಾಗಿಯೂ, ಮಾನ್ಯ ಸಚಿವರ ಮಾತಿಗೆ ಗೌರವ ಸಲ್ಲಿಸುವ ದೃಷ್ಟಿಯಿಂದ ಈ ವಿಷಯವನ್ನು ಪುನರ್ ಪರಿಶೀಲಿಸಿ, ನಿರ್ಣಯ ಕೈಗೊಳ್ಳುವುದು ಸೂಕ್ತವೆಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.

ಮಾನ್ಯ ಸದಸ್ಯರಾದ ಡಾ. ಆರ್.ಹೆಚ್. ಅಕಮಂಚಿರವರು, ಪ್ರಸ್ತುತ ಮಂಡಕಳ್ಳಿ ಕಟ್ಟಡವು ಖಾಲಿ ಇದ್ದು, ಕಟ್ಟಡವನ್ನು ಉಪಯೋಗಿಸುತ್ತಿಲ್ಲವಾದ್ದರಿಂದ ಇದನ್ನು ಸದುಪಯೋಗ ಪಡಿಸಿಕೊಳ್ಳುವುದು ಉತ್ತಮವೆಂದು ಸಲಹೆ ನೀಡಿದರು ಹಾಗೂ 10 ಎಕರೆ ಜಾಗದ ಬಗ್ಗೆ ಈ ಹಿಂದೆ ನಡೆದ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಬಾಡಿಗೆಗೆ ನೀಡಲು ಸದಸ್ಯರುಗಳು ತಮ್ಮ ಸಮ್ಮತಿಯನ್ನು ನೀಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ನಂತರ, ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಈ ವಿಷಯವಾಗಿ ಸದಸ್ಯರ ಸಮ್ಮತಿಯನ್ನು ಪಡೆಯದೇ Tripartite ಕರಾರು ಒಪ್ಪಂದವನ್ನು ಮಾಡಿಕೊಂಡಿರುವುದಕ್ಕೆ ತಮ್ಮ ಆಕ್ಷೇಪಣೆಯನ್ನು ವ್ಯಕ್ತ ಪಡಿಸಿದರು.

ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಗಳು, ಒಂದು ಎಕರೆ ಜಮೀನನ್ನು ಬಾಡಿಗೆಗೆ ನೀಡುವುದು ಸಮಂಜಸವೆಂದು ಅಭಿಪ್ರಾಯಪಟ್ಟರು.

ಕುಲಪತಿಗಳು

ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಮಾನ್ಯ ಉನ್ನತ ಶಿಕ್ಷಣ ಸಚಿವರ ಸಲಹೆಯಂತೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಸದರಿ ವಿಷಯದ ಬಗ್ಗೆ ಸರ್ವಾನುಮತದ ಒಪ್ಪಿಗೆ ಪಡೆದು ತೀರ್ಮಾನ ತೆಗೆದುಕೊಳ್ಳುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.

********

ವಿಷಯ ಸಂಖ್ಯೆ : 58.04

ವಿಷಯ : ವಿ.ವಿ ನಿಲಯದ ಮಾನ್ಯ ಕುಲಪತಿಗಳಿಗೆ ವಾಸಿಸಲು ಅಧಿಕೃತ ನಿವಾಸವನ್ನು ನೂತನವಾಗಿ ನಿರ್ಮಿಸುವ ಬಗ್ಗೆ.

********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 1994ನೇ ಇಸವಿಯಂದು ಸ್ವತಂತ್ರ ವಿವಿನಿಲಯವಾಗಿ ಸ್ಥಾಪನೆಗೊಂಡಿದ್ದು ವಿವಿನಿಲಯವು ತನ್ನದೇ ಆದ ಕಾಯ್ದೆ ಮತ್ತು ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯವನ್ನು ನಿರ್ವಹಿಸುತ್ತಿದೆ.

ಕರಾಮುವಿ ನಿಲಯದ 1994ರ ಕಾಯ್ದೆಯನ್ವಯ ಘನತೆವೆತ್ತ ರಾಜ್ಯಪಾಲರು / ಕುಲಾಧಿಪತಿಗಳು ವಿವಿನಿಲಯದ ಉಪಕುಲಪತಿಯವರನ್ನು ನೇಮಕ ಮಾಡಅದ್ದು ವಿವಿನಿಲಯದ 1994ರ ಕಾಯ್ದೆಯ ಎರಡನೇ ಅನುಸೂಚಿಯ ಅನುಸಾರ (23ನೇ ಪ್ರಕರಣ) ಮೊದಲನೇ ಪರಿನಿಯಮ 5(i) ರಲ್ಲಿ ತಿಳಿಸಿರುವಂತೆ ವಿವಿನಿಲಯದ ಕುಲಪತಿಯವರು ನಿರ್ಧರಿಸಬಹುದಾದ ವೇತನವನ್ನು ವಿವಿನಿಲಯವು ಉಪಕುಲಪತಿಯವರಿಗೆ ಸಂದಾಯ ಮಾಡತಕ್ಕದ್ದು ಮತ್ತು ಅವರು ತಮ್ಮ ಇಡೀ ಪದಾವಧಿಯಲ್ಲಿ ವಿಶ್ವವಿದ್ಯಾನಿಲಯದ ಕಾರನ್ನು ಉಚಿತವಾಗಿ ಬಳಸಲು ಮತ್ತು ಬಾಡಿಗೆಯನ್ನು ಸಂದಾಯ ಮಾಡದೇ ಸುಸಜ್ಜಿತವಾದ ನಿವಾಸವನ್ನು ಬಳಸಲು ಹಕ್ಕುಳ್ಳವಾಗತಕ್ಕದ್ದು ಮತ್ತು ಅಂಥ ನಿವಾಸದ ನಿರ್ವಹಣೆಯ ಸಂಬಂಧದಲ್ಲಿ ಉಪಕುಲಪತಿಯವರಿಗೆ ವೈಯಕ್ತಿಕವಾಗಿ ಯಾವುದೇ ವೆಚ್ಚ ತಗಲತಕ್ಕುದಲ್ಲ ಎಂಬುದಾಗಿ ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕರಾಮುವಿ ನಿಲಯಕ್ಕೆ ಈ ಹಿಂದೆ ನೇಮಕ ಗೊಂಡಿರುವಂತಹ ಎಲ್ಲಾ ಉಪಕುಲಪತಿಗಳಿಗೆ ಸುಸಜ್ಜಿತವಾದ ನಿವಾಸವನ್ನು ಬಾಡಿಗೆಯ ಆಧಾರದ ಮೇಲೆ ಪಡೆದು ಒದಗಿಸಲಾಗುತ್ತಿದ್ದು ಮತ್ತು ಇದರ ಸಂಪೂರ್ಣ ನಿರ್ವಹಣೆಯನ್ನು ವಿವಿನಿಲಯದಿಂದಲೇ ನಿರ್ವಹಿಸಲಾಗುತ್ತಿದೆ. ಮುಂದುವರೆದು ಹೀಗೆ ಪ್ರತಿ ಬಾರಿ ಹೊಸದಾಗಿ ನೇಮಕಗೊಳ್ಳುವಂತಹ ಮಾನ್ಯ ಕುಲಪತಿಗಳಿಗೆ ವಿವಿನಿಲಯದಿಂದ ಸುಸಜ್ಜಿತವಾದ ನಿವಾಸವನ್ನು ಒದಗಿಸಲು ವಿವಿನಿಲಯದ ಸಮೀಪವಿರುವ ಬಡಾವಣೆಗಳಲ್ಲಿ ಪರಿಶೀಲಿಸಬೇಕಾಗಿದ್ದು ಇತ್ತೀಚಿನ ದಿನಗಳಲ್ಲಿ ಸುಸಜ್ಜಿತ ನಿವಾಸಗಳು ವಿವಿನಿಲಯದ ಸಮೀಪ ಬಾಡಿಗೆಗೆ ಲಭ್ಯವಾಗುವುದು ಕಷ್ಟ ಸಾಧ್ಯವಾಗಿರುತ್ತದೆ.

ಈ ಸಂಬಂಧ ವಿವಿನಿಲಯದ ಮುಕ್ತಗಂಗೋತ್ರಿ ಆವರಣದಲ್ಲಿನ ಲಭ್ಯವಿರುವ ಸೂಕ್ತ ಸ್ಥಳದಲ್ಲಿ ಮಾನ್ಯ ಕುಲಪತಿಗಳಿಗೆ ವಾಸಿಸಲು ಸುಸಜ್ಜಿತವಾದ ನೂತನ ಮಾದರಿಯ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒಳಗೊಂಡಿರುವಂತಹ ನಿವಾಸವನ್ನು ನಿರ್ಮಿಸಿದ್ದಲ್ಲಿ ಪ್ರತಿ ಬಾರಿಯು ಬಾಡಿಗೆಯ ಆಧಾರದ ಮೇಲೆ ನಿವಾಸವನ್ನು ಹುಡುಕುವ ಸಮಸ್ಯೆಯು ಬಗೆಹರಿಯುವುದರ ಜೊತೆಗೆ ಹಾಗೂ ಉದ್ದೇಶಿತ ನಿವಾಸವು ನಿರ್ಮಾಣಗೊಂಡಲ್ಲಿ ಮಾನ್ಯ ಕುಲಪತಿಯವರು ಕಾರ್ಯ ನಿರ್ವಹಿಸಲು ಅನುಕೂಲವಾಗಿರುತ್ತದೆ.

ಕುಲಪತಿಗಳು ಕುಲಸಚಿವರು

ಆದುದರಿಂದ, ವಿವಿನಿಲಯವು ಈಗಾಗಲೇ ಕಾಮಗಾರಿಗಳಿಗೆ ನಿಯೋಜಿಸಿಕೊಂಡಿರುವ ವಾಸ್ತುಶಿಲ್ಪ ವಿನ್ಯಾಸಗಾರರು ಹಾಗೂ PMC (Project Management Consultancy) ರವರಿಂದ ಮಾನ್ಯ ಕುಲಪತಿಗಳ ಅಧಿಕೃತ ನಿವಾಸವನ್ನು ನೂತನವಾಗಿ ನಿರ್ಮಿಸುವ ಕಾಮಗಾರಿಗೆ ವಾಸ್ತುಶಿಲ್ಪ, ವಿನ್ಯಾಸ ಹಾಗೂ PMC ಕೆಲಸವನ್ನು ನಿರ್ವಹಿಸಿಕೊಳ್ಳಬಹುದಾಗಿರುತ್ತದೆ. ಕಾಮಗಾರಿಗೆ ಒಟ್ಟು ರೂ. ೩೦೦.೦೦ ಲಕ್ಷ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಸದರಿ ಕೆಲಸವನ್ನು ಟೆಂಡರ್ ಕರೆದು ನಿರ್ವಹಿಸಲು ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ :</u>

ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಮುಕ್ತ ವಿ.ವಿ. ಆವರಣದಲ್ಲಿ ಕುಲಪತಿಗಳ ವಾಸ್ತವ್ಯಕ್ಕೆ ಮೈಸೂರು ವಿ.ವಿ.ಯಿಂದ ಉದ್ಭವಿಸಬಹುದಾದ ಆಕ್ಷೇಪಣೆಗಳ ಬಗ್ಗೆ ಚರ್ಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿದ್ದ ಕಾರ್ಯಪಾಲಕ ಅಭಿಯಂತರರು, ಮೈಸೂರು ವಿ.ವಿ.ಯ ಒಟ್ಟು ಜಮೀನನ್ನು ಮುಕ್ತ ವಿ.ವಿ.ಗೆ ೯೯ ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿರುವುದರಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಅಂತಿಮವಾಗಿ, ಸಭೆಯು ವಿ.ವಿ ನಿಲಯದ ಮಾನ್ಯ ಕುಲಪತಿಗಳಿಗೆ ಅಧಿಕೃತ ನಿವಾಸ ನಿರ್ಮಿಸಲು ಟೆಂಡರ್ ನಿಯಮಾವಳಿಗಳಂತೆ ಕೆಲಸವನ್ನು ನಿರ್ಮಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

********

<u>ವಿಷಯ ಸಂಖ್ಯೆ : ೫೮.೦೫</u>

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಕಾರ್ಯ ಸೂಚಿಯನ್ನು ಹಾಗೂ ವಿಶ್ವವಿದ್ಯಾನಿಲಯ ಆದಾಯ ಹಾಗು ಖರ್ಚು ವೆಚ್ಚಗಳ ಪಟ್ಟಿಗಳನ್ನು ದಾಖಲೆಗಳೊಂದಿಗೆ ಮಂಡಿಸುವ ಬಗೆಗೆ.

********

ಶ್ರೀ. ಪುಟ್ಟಣ್ಣ, ವಿಧಾನ ಪರಿಷತ್ ಸದಸ್ಯರು, ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ, ಮೈಸೂರು, ರವರು ಕರಾಮುವಿಯ ವಿವಿಧ ಮಾಹೆಗಳ ಆದಾಯ ಮತ್ತು ಖರ್ಚು ವೆಚ್ಚಗಳ ಪಟ್ಟಿಯನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸುವಂತೆ ದಿನಾಂಕ 16.11.2022ರ ಪತ್ರದಲ್ಲಿ ಕೋರಿದ್ದು, ಸದರಿಯವರು ಕೋರಿರುವ ವಿವರಗಳನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿದೆ.

<u>ತೀರ್ಮಾನ :</u>

ಸದರಿ ವಿಷಯದ ಬಗ್ಗೆ ಅವಗಾಹಿಸಿದ ಸಭೆಯು, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರ ಅನುಪಸ್ಥಿತಿಯಲ್ಲಿ ವಿಷಯವನ್ನು ಚರ್ಚಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಿಸಿ ವಿಷಯವನ್ನು **'Defer'** ಮಾಡುವಂತೆ ನಿರ್ಣಯಿಸಿತು.

*******

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ : 58.06**

ವಿಷಯ : 60 ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.

********

ದಿನಾಂಕ: 05.12.2022 ರಂದು ನಡೆದ 60 ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆ ನಡವಳಿಯನ್ನು ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ :**

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ದಿನಾಂಕ: 05.12.2022 ರಂದು ನಡೆದ 60ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು ಹಾಗೂ **ವಿಷಯ ಸಂಖ್ಯೆ : 60.02** ಕ್ಕೆ ಸಂಬಂಧಿಸಿದಂತೆ **Code of conduct monitoring** ಸಮಿತಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಪಡೆದು ಮುಂದಿನ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು.

*********

**ವಿಷಯ ಸಂಖ್ಯೆ : 60.21** ಕ್ಕೆ ಸಂಬಂಧಿಸಿದಂತೆ ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್ (KDCCB), ಶಿರಸಿ, ಉತ್ತರ ಕನ್ನಡ ಜಿಲ್ಲೆ ಇವರು ಜೂನಿಯರ್ ಕ್ಲರ್ಕ್/ ಜೂನಿಯರ್ ಸೂಪರ್ ವೈಸರ್ ಹುದ್ದೆಗಳ ನೇಮಕಾತಿ ಮಾಡುವ ಸಂಬಂಧ ಲಿಖಿತ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸಿಕೊಡಲು ತಗಲುವ ಅಂದಾಜು ವೆಚ್ಚದ ವಿವರಗಳ ಬಗ್ಗೆ ಮಾಹಿತಿ ಒದಗಿಸುವಂತೆ ಸಭೆಯು ಸೂಚಿಸಿತು. ಅಂದಾಜು ವೆಚ್ಚದ ವಿವರಗಳನ್ನೊಳಗೊಂಡ ಪಟ್ಟಿಯನ್ನು ಅವಗಾಹಿಸಿದ ಸಭೆಯು, ಲಿಖಿತ ಪರೀಕ್ಷೆಯನ್ನು ನಡೆಸಲು ಸಭೆಯು ಅನುಮೋದಿಸಿತು.

*****

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ವಿಷಯಗಳು :-**

1. ಮಾನ್ಯ ಸದಸ್ಯರಾದ ಶ್ರೀ ಎನ್. ಕೃಷ್ಣೇಗೌಡ ರವರು ಮಾತನಾಡಿ, ಸಭೆಯ ಮುಂದೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಲು ಅನುಮತಿ ನೀಡುವಂತೆ ಕೋರಿ, ವಿಶ್ವವಿದ್ಯಾನಿಲಯದ ಒಟ್ಟು 04 ಸಿಬ್ಬಂದಿವರ್ಗದವರು ನಿಧನ ಹೊಂದಿದ್ದು, ಸದರಿ ಸಿಬ್ಬಂದಿಗಳ ಪಿಂಚಣಿಯು ಇದುವರೆವಿಗೂ ಇತ್ಯರ್ಥವಾಗಿಲ್ಲವೆಂದು ತಿಳಿಸುತ್ತಾ, ಆದಷ್ಟು ಬೇಗ ಈ ವಿಷಯವಾಗಿ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಸೂಚಿಸಿದರು.

   ಇದಕ್ಕೆ, ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಕುಲಪತಿಗಳು ಈ ವಿಚಾರವಾಗಿ ಬೋಧಕ ವೃಂದದವರಾಗಲೀ, ಬೋಧಕೇತರ ವರ್ಗದವರಿಗಾಗಲೀ ಭೇದಭಾವವಿಲ್ಲದೆ ನ್ಯಾಯೋಚಿತ ನಿರ್ಧಾರವನ್ನು ತೆಗೆದುಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

2. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, 22 ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ನೀಡಿರುವುದಕ್ಕೆ ವಿವರಣೆ ಕೋರಿದರು.

ಕುಲಪತಿಗಳು ಕುಲಸಚಿವರು

ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು, ಸದರಿ ವಿಷಯವನ್ನು ದಿನಾಂಕ: 17.08.2021 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 54ನೇ ವಿಶೇಷ ಸಭೆಯಲ್ಲಿ ಚರ್ಚಿಸಿದ್ದು, ನ್ಯಾಯಾಲಯದ ತೀರ್ಪಿಗೆ ಒಳಪಟ್ಟು, ನ್ಯಾಯಬದ್ಧವಾಗಿ ಸಿಗಬೇಕಿದ್ದ ಎಲ್ಲಾ ಸೌಲಭ್ಯಗಳನ್ನು ಮುಚ್ಚಳಿಕೆ ಬರೆಸಿಕೊಂಡು ವಿಸ್ತರಿಸಿದ್ದು, ಈ ವಿಷಯವಾಗಿ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳ ಅನುಮತಿ ಪಡೆದುಕೊಂಡೇ ಕ್ರಮಕೈಗೊಂಡಿರುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಆರ್.ಹೆಚ್. ಅಕಮಂಚಿ ರವರು ಮಾತನಾಡಿ, ಪಿ.ಎಚ್.ಡಿ ಮಾರ್ಗಸೂಚಿಯ ಬಗ್ಗೆ ಮಾತ್ರ ಚರ್ಚಿಸಲಾಯಿತೇ ಹೊರತು, ಪದೋನ್ನತಿ ಬಗ್ಗೆ ಚರ್ಚಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಸದಸ್ಯರಾದ ಪ್ರೊ. ಯಶಸ್ವಿನಿ.ಎಸ್. ಇವರು ಮಾತನಾಡಿ, ಈ ಹಿಂದಿನ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಸರಿ ಇರುವುದಾಗಿ ತಿಳಿಸಿದರು.

ಮುಂದುವರೆದು, ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿ.ಎಚ್.ಡಿ ಮಾರ್ಗದರ್ಶನ ನೀಡಲು ಅವಕಾಶ ಕಲ್ಪಿಸಲಾಗುವುದು ಎಂದು ಮಾನ್ಯ ಕುಲಪತಿಗಳು ತಿಳಿಸಿದರು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 58ನೇ ವಿಶೇಷ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಪತಿಗಳು

ಕುಲಸಚಿವರು